# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಜಲ ಸಂಪನ್ಮೂಲ ಇಲಾಖೆಯ ಅಡಿಯಲ್ಲಿನ ಏತ ನೀರಾವರಿ ಯೋಜನೆಗಳ ಸಮರ್ಪಕ ಕಾರ್ಯಾಚರಣೆ ಹಾಗೂ ನಿರ್ವಹಣೆಗಾಗಿ ಅಗತ್ಯವಿರುವ ಕರಡು ನೀತಿಯನ್ನು ಅಂತಿಮಗೊಳಿಸಲು ಸಮಿತಿಯನ್ನು ರಚಿಸುವ ಬಗ್ಗೆ.

** ** **

**ಪ್ರಸ್ತಾವನೆ :-**

ಕರ್ನಾಟಕ ರಾಜ್ಯದ ಜಲಸಂಪನ್ಮೂಲ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ವಿವಿಧ ನಿಗಮಗಳ ವ್ಯಾಪ್ತಿಯಲ್ಲಿ ಈಗಾಗಲೇ ಅನುಷ್ಠಾನಗೊಂಡು ಚಾಲ್ತಿಯಲ್ಲಿರುವ ಹಾಗೂ ಪ್ರಸ್ತುತ ಅನುಷ್ಠಾನಗೊಳಿಸಲಾಗುತ್ತಿರುವ ಏತ ನೀರಾವರಿ ಯೋಜನೆಗಳಲ್ಲಿ ಸಮರ್ಪಕ ಕಾರ್ಯಾಚರಣೆ ಹಾಗೂ ನಿರ್ವಹಣೆಗಳನ್ನು ಕೈಗೊಂಡು, ನವೀನ ತಂತ್ರಜ್ಞಾನಗಳ ಸಮರ್ಪಕ ಅಳವಡಿಕೆಯೊಂದಿಗೆ ಏತ ನೀರಾವರಿ ವ್ಯವಸ್ಥೆಗಳು ಹಾಗೂ ತತ್ಸಂಬಂಧಿ ಪರಿಕರಗಳ ಕಾರ್ಯಕ್ಷಮತೆ/ ಕಾರ್ಯದಕ್ಷತೆಯನ್ನು ಹೆಚ್ಚಿಸಿ, ಕಡಿಮೆ ವಿದ್ಯುಚ್ಛಕ್ತಿಯ ಬಳಕೆಯೊಂದಿಗೆ ದಕ್ಷ ಸೇವೆಯನ್ನೊದಗಿಸಲು ಸಹಕಾರಿಯಾಗುವಂತೆ ಒಂದು ಸೂಕ್ತ ಕರಡು ನೀತಿಯನ್ನು ರೂಪಿಸುವ ತುರ್ತು ಅವಶ್ಯಕತೆ ಇರುವುದನ್ನು, ದಿನಾಂಕ 21.01.2021ರಂದು ಮಾನ್ಯ ಜಲ ಸಂಪನ್ಮೂಲ ಸಚಿವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ತೀರ್ಮಾನಿಸಲಾಯಿತು. ಅದರಂತೆ ಕರಡು ನೀತಿಯನ್ನು ಅಂತಿಮಗೊಳಿಸಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಅಧಿಕಾರಿಗಳು ಹಾಗೂ ಅಧಿಕಾರೇತರ ಆಹ್ವಾನಿತರನ್ನು ಒಳಗೊಂಡ ಸಮಿತಿಯನ್ನು ರಚಿಸುವುದು ಅವಶ್ಯಕವಾಗಿರುವ ಹಿನ್ನೆಲೆಯಲ್ಲಿ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ:

## ಸರ್ಕಾರಿ ಆದೇಶ ಸಂಖ್ಯೆ:ಜಸಂಇ 80 ಎಂಎಂಕೆ 2020, ಬೆಂಗಳೂರು, ದಿನಾಂಕ:07-04-2021

ಜಲಸಂಪನ್ಮೂಲ ಇಲಾಖೆ ಅಡಿಯಲ್ಲಿನ ಏತ ನೀರಾವರಿ ಯೋಜನೆಗಳ ಸಮರ್ಪಕ ಕಾರ್ಯಾಚರಣೆ ಹಾಗೂ ನಿರ್ವಹಣೆಗಾಗಿ ಅಗತ್ಯವಿರುವ ಕರಡು ನೀತಿಯನ್ನು ಅಂತಿಮಗೊಳಿಸಲು ಈ ಕೆಳಕಂಡ ಅಧಿಕಾರಿಗಳು ಹಾಗೂ ಅಧಿಕಾರೇತರ ಆಹ್ವಾನಿತರನ್ನು ಒಳಗೊಂಡ ಸಮಿತಿಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರಚಿಸಲಾಗಿದೆ:

| | | |
|---|---|---|
| 1. | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,<br>ಜಲಸಂಪನ್ಮೂಲ ಇಲಾಖೆ | ಅಧ್ಯಕ್ಷರು |
| 2. | ಸರ್ಕಾರದ ಕಾರ್ಯದರ್ಶಿ,<br>ಜಲಸಂಪನ್ಮೂಲ ಇಲಾಖೆ | ಸದಸ್ಯರು |
| 3. | ವ್ಯವಸ್ಥಾಪಕ ನಿರ್ದೇಶಕರು,<br>ಕಾವೇರಿ ನೀರಾವರಿ ನಿಗಮ ನಿಯಮಿತ | ಸದಸ್ಯರು |
| 4. | ವ್ಯವಸ್ಥಾಪಕ ನಿರ್ದೇಶಕರು,<br>ಕರ್ನಾಟಕ ನೀರಾವರಿ ನಿಗಮ ನಿಯಮಿತ | ಸದಸ್ಯರು |
| 5. | ವ್ಯವಸ್ಥಾಪಕ ನಿರ್ದೇಶಕರು,<br>ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ | ಸದಸ್ಯರು |
| 6. | ವ್ಯವಸ್ಥಾಪಕ ನಿರ್ದೇಶಕರು,<br>ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ | ಸದಸ್ಯರು |
| 7. | ಪ್ರಧಾನ ಇಂಜಿನಿಯರ್,<br>ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ | ಸದಸ್ಯರು |
| 8. | ಸರ್ಕಾರದ ಉಪ ಕಾರ್ಯದರ್ಶಿಗಳು (ಕೃಭಾಜನಿ),<br>ಜಲಸಂಪನ್ಮೂಲ ಇಲಾಖೆ | ಸದಸ್ಯ ಕಾರ್ಯದರ್ಶಿ |

**ಪುಟ-2 ಕ್ಕೆ**

| | | |
|---|---|---|
| 9. | ಶ್ರೀ ಆರ್. ರುದ್ರಯ್ಯ,<br>ನಿವೃತ್ತ ಕಾರ್ಯದರ್ಶಿಗಳು, ಸಣ್ಣ ನೀರಾವರಿ ಇಲಾಖೆ,<br>ಬೆಂಗಳೂರು, | ಆಹ್ವಾನಿತರು |
| 10. | ಶ್ರೀ ಎಸ್. ಪಿ. ಸಕ್ಕರಿ,<br>ವ್ಯವಸ್ಥಾಪಕ ನಿರ್ದೇಶಕರು (ನಿವೃತ್ತ) ಹೆಸ್ಕಾಂ,<br>ಹುಬ್ಬಳಿ | ಆಹ್ವಾನಿತರು |
| 11. | ಶ್ರೀ ರಂಗರಾಜನ್,<br>ಮುಖ್ಯ ಇಂಜಿನಿಯರ್ (ನಿವೃತ್ತ),<br>ಏತ ನೀರಾವರಿ ತಜ್ಞರು, ಬೆಂಗಳೂರು | ಆಹ್ವಾನಿತರು |
| 12. | ಶ್ರೀ ಆರ್. ವಾಸುದೇವನ್,<br>ಮುಖ್ಯ ಇಂಜಿನಿಯರ್ (ನಿವೃತ್ತ),<br>ಏತ ನೀರಾವರಿ ತಜ್ಞರು, ಬೆಂಗಳೂರು | ಆಹ್ವಾನಿತರು |

2) ಸದರಿ ಸಮಿತಿಯು ಇಲಾಖೆಯಡಿ ಬರುವ ನಿಗಮಗಳಿಂದ ಅಭಿಪ್ರಾಯ/ಸಲಹೆ ಪಡೆದು ಒಂದು ತಿಂಗಳ ಅವಧಿಯಲ್ಲಿ ವರದಿಯನ್ನು ಅಂತಿಮಗೊಳಿಸಿ ಸರ್ಕಾರಕ್ಕೆ ಸಲ್ಲಿಸುವುದು.

3) ಸದರಿ ಸಮಿತಿಯ ಸದ್ಯಸರ ಪ್ರವಾಸ ಭತ್ಯೆ ಮತ್ತು ಇತರೆ ಭತ್ಯೆಗಳನ್ನು ಸರ್ಕಾರದ ಆದೇಶ ಸಂಖ್ಯೆ:ಆಇ 3 ಸನಿತಿ 2015, ದಿನಾಂಕ:03.08.2015, ರನ್ವಯ ಪಾವತಿ ಮಾಡತಕ್ಕದ್ದು. ಈ ಬಗ್ಗೆ ತಗಲುವ ವೆಚ್ಚವನ್ನು ಕರ್ನಾಟಕ ನೀರಾವರಿ ನಿಗಮ ನಿಗಮಕ್ಕೆ ನೀಡಲಾದ ಅನುದಾನದಲ್ಲಿ ಭರಿಸತಕ್ಕದ್ದು.

**ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ**
**ಮತ್ತು ಅವರ ಹೆಸರಿನಲ್ಲಿ**

07/04/2021
**(ಮನೋಹರ ವೈ. ರೊಟ್ಟಿ)**
**ಸರ್ಕಾರದ ಅಧೀನ ಕಾರ್ಯದರ್ಶಿ (ತಾಂ-2)**
**ಜಲ ಸಂಪನ್ಮೂಲ ಇಲಾಖೆ.**

**ಇವರಿಗೆ :-**

1. ಪ್ರಧಾನ ಮಹಾಲೇಖಪಾಲರು (ಸಾಮಾನ್ಯ ಮತ್ತು ಸಾಮಾಜಿಕ ವಲಯ ಲೆಕ್ಕ ಪರಿಶೋಧನ), ಕರ್ನಾಟಕ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ ಇವರ ಆಪ್ತ ಶಾಖೆಗೆ.
3. ಸರ್ಕಾರದ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ ಇವರ ಆಪ್ತ ಶಾಖೆಗೆ.
4. ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು.
5. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು
6. ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ, ಬೆಂಗಳೂರು.
7. ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು
8. ಪ್ರಧಾನ ಇಂಜಿನಿಯರ್, ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು.
9. ಸಮಿತಿಯ ಎಲ್ಲಾ ಆಹ್ವಾನಿತರುಗಳಿಗೆ - ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ, ಬೆಂಗಳೂರು, ಇವರ ಮುಖಾಂತರ.
10. ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ ಇವರ ಆಪ್ತ ಶಾಖೆಗೆ.
11. ಸರ್ಕಾರದ ಉಪ ಕಾರ್ಯದರ್ಶಿಗಳು (ಕೆ.ಬಿ.ಜೆ.ಎನ್), ಜಲಸಂಪನ್ಮೂಲ ಇಲಾಖೆ ಇವರ ಆಪ್ತ ಶಾಖೆಗೆ.
12. ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯ ಪತ್ರ (ಇ-ಗೆಜೆಟ್ ನಲ್ಲಿ ಪ್ರಕಟಣೆಗಾಗಿ)
13. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

+++++